# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 198 | Pages. 2 | Date: 15-06-2025, SUNDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 198 - ಪುಟಗಳು : 2 - 15 ಜೂನ್ 2025 ಭಾನುವಾರ Ph: 8762954248 ದರ : ₹1


# ಸೇವಾ ಮನೋಭಾವ ಇದ್ದರೆ ಬದುಕು ಸುಂದರ

## ಯುಪಿಎಸ್ಸಿ ಸಾಧಕರಿಗೆ ಒಕ್ಕಲಿಗ ಯುವ ಬ್ರಿಗೇಡ್‌ನಿಂದ ಸನ್ಮಾನ | ಚುಂಚಶ್ರೀ ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನನ್ನ ಬದುಕಿಗೆ ಸಾಕಷ್ಟಿದೆ ಸಮಾಜಕ್ಕೆ ಇಂತಿಷ್ಟು ಕೊಡೋಣ ಎಂದರೆ ಅಂತವರು ಏಳಿಗೆ ಸಾಧಿಸುತ್ತಾರೆ. ಶ್ರೇಷ್ಠವಾಗಿ ಉಳಿಯುತ್ತಾರೆ. ತನ್ನ ಬದುಕಿನಾಚೆಗೆ ಕೈಚಾಚಿ ಸಮಾಜಕ್ಕೆ ಯಾರು ಕೊಡುತ್ತಾರೋ ಅಂತಹ ವ್ಯಕ್ತಿಯ ಬದುಕಿನ ಕ್ಷಣಗಳು ಆನಂದಮಯವಾಗಿರುತ್ತವೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ನಗರದ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಹೊಯ್ಸಳ ನಾಡಿನ ಅಪ್ರತಿಮ ಸಾಧಕರಿಗೆ ಅಭಿನಂದನೆ ಹಾಗೂ ಸಮುದಾಯದ ಯುಪಿಎಸ್ಸಿ ಸಾಧಕರಿಗೆ ಸನ್ಮಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಯುಪಿಎಸ್‌ಸಿ ಪರೀಕ್ಷೆ ಬರೆದವರು ಸಾಮಾಜಿಕ ಸೇವೆಗೆ ಬರುವುದು ಸಮಾಜಕ್ಕೆ ಏನಾದರೂ ಕೊಡುಗೆ ನೀಡುವುದಕ್ಕಾಗಿ ಹೊರತು ಸಂಪಾದನೆಗಾಗಿ ಅಲ್ಲ. ದುಡಿಮೆಯೇ ಅವರ ಉದ್ದೇಶವಾಗಿದ್ದರೆ ಸಾಫ್ಟ್‌ವೇರ್ ಇಂಜಿನೀಯರ್‌ಗಳಾಗುತ್ತಿದ್ದರು ಎಂದು ಹೇಳಿದರು.

ಈಶ್ವರ ಪಾರ್ವತಿಗೆ ಯಶಸ್ಸಿನ ಕುರಿತು ಏಳು ಸೂತ್ರಗಳನ್ನು ಹೇಳುತ್ತಾನೆ. ವಿಶ್ವಾಸ, ಶ್ರದ್ಧೆ, ಗುರುಭಕ್ತಿ, ಸಮತಾಭಾವ, ಇಂದ್ರಿಯ ನಿಗ್ರಹ, ಉತ್ತಮ ಆಲೋಚನೆಗಳು ಇದ್ದರೆ ನಂತರದಲ್ಲಿ ಯಶಸ್ಸು ಸಿಗುತ್ತದೆ. ಈಗ ಯುಪಿಎಸ್ಸಿ ಪಾಸಾದವರು ಸಾಕಷ್ಟು ಕಷ್ಟಪಟ್ಟಿದ್ದಾರೆ. ಸಾಧನೆಯ ಹಾದಿಯಲ್ಲಿ ಹಲವು ಸಮಸ್ಯೆಗಳು ಬರುತ್ತವೆ. ಸುನಾಮಿ ಸಂದರ್ಭದಲ್ಲಿ ಸಮುದ್ರ ಹೇಗಿರುತ್ತದೋ ಅಲ್ಲಿನ ಅಲೆಗಳು ಹೇಗಿರುತ್ತವೆಯೋ ಹಾಗೆ ಬದುಕು ಇರುತ್ತದೆ. ಅಲೆಗಳನ್ನು ಎದುರಿಸಿ ದಡ ಸೇರುವುದು ಎಷ್ಟು ಕಷ್ಟ ಎಂಬುದು ಅನುಭವಿಸಿದವರಿಗೆ ಗೊತ್ತು. ಅಂತಹ ಕಠಿಣ ಪರೀಕ್ಷೆಯಲ್ಲಿ ಇವರೆಲ್ಲ ಗೆದ್ದಿದ್ದಾರೆ ಎಂದರು.

ನಮ್ಮ ಜಾತಿಯವರು ಎಂಬ ಕಾರಣಕ್ಕೆ ಸಾಧಕರನ್ನು ಸನ್ಮಾನಿಸುತ್ತಿಲ್ಲ. ಜನಾಂಗಕ್ಕೆ ಇವರು ಮಾದರಿಯಾಗಬೇಕು ಎಂಬುದು ಈ ಕಾರ್ಯಕ್ರಮ ಧ್ಯೇಯ. ಐಎಎಸ್ ಪಾಸು ಮಾಡಿದವರು ದೊಡ್ಡವರು, ಐಪಿಎಸ್, ಐಆರ್‌ಎಸ್ ಮಾಡಿದವರು ಕೆಳಮಟ್ಟದವರು ಎನ್ನುವುದು ಸರಿಯಲ್ಲ. ಸೇವೆ ಮಾಡಲು ಯಾವ ಹುದ್ದೆಯಾದರೆ ಏನು ವ್ಯತ್ಯಾಸ ಎಂದರು.

ನೀವೆಲ್ಲರೂ ತುಂಬಾ ಚಿಕ್ಕವಯಸ್ಸಿನಲ್ಲಿ ಸೇವೆಗೆ ಸೇರಿದ್ದಿರಿ. ಆದಷ್ಟು ಒಳ್ಳೆಯ ಕೆಲಸಗಳನ್ನು ಮಾಡಬೇಕು. ಸಮುದಾಯದ ಅನೇಕರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಅವರೆಲ್ಲರಿಗೂ ಒಳಿತಾಗಲಿ ಎಂದು ಹಾರೈಸಿದರು.

ಯುಪಿಎಸ್ಸಿ ಸಾಧಕರಾದ ಡಾ. ಆರ್. ಮಾಧವಿ, ಮಧು, ಉಲ್ಲಾಸ್, ಎನ್. ನಮ್ರತಾ, ನಿಯಾ ಗೌಡ, ಬಿ.ಎಸ್. ವಿಷ್ಣು ಅವರನ್ನು ಸನ್ಮಾನಿಸಲಾಯಿತು. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಉಪಸ್ಥಿತಿ ವಹಿಸಿದ್ದರು. ಐಎಫ್‌ಎಸ್ ಅಧಿಕಾರಿ ಸಿ.ಕೆ. ಯೋಗೀಶ್, ಐಎಎಸ್ ಅಧಿಕಾರಿ ಎಸ್. ಶ್ರೇಯಸ್, ಪತ್ರಕರ್ತ ಎ. ಹರಿಪ್ರಸಾದ್, ಡಾ. ರವಿ, ಉದ್ಯಮಿಗಳಾದ ದೀಪು ಗೌಡ, ವೆಂಕಟೇಶ್ ಮಾತನಾಡಿದರು. ಮೇಯರ್ ಎಂ. ಚಂದ್ರೇಗೌಡ, ರುದ್ರಪ್ಪ, ಲೋಕೇಶ್‌ಬಾಬು, ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ನಂಜುಂಡ ನಂಜೇಗೌಡ, ಮಂಜುನಾಥ್ ಮತ್ತಿತರರಿದ್ದರು.





### ಜಗತ್ತು ಅಪಾಯಕಾರಿ ಸ್ಥಿತಿಯಲ್ಲಿ

ಐಆರ್‌ಎಸ್ ಅಧಿಕಾರಿ ವರುಣ್ ರಂಗಸ್ವಾಮಿ ಮಾತನಾಡಿ, ಯುಪಿಎಸ್ ಪರೀಕ್ಷೆ ಪಾಸು ಮಾಡಿರುವ ನಿಮ್ಮನ್ನು ಇಲ್ಲಿತನಕ ಉಬ್ಬಿಸಿರುತ್ತಾರೆ. ತರಬೇತಿ ಅವಧಿಯಲ್ಲೂ ಯಾವ ಕಷ್ಟಗಳು ಎದುರಾಗುವುದಿಲ್ಲ. ಸೇವೆಗೆ ಸೇರಿದಾಗಲೇ ಅದರ ಫಲಿತಾಂಶ ಗೊತ್ತಾಗುವುದು. ಬಹಳಷ್ಟು ಶಕ್ತಿಗಳು ನಿಮ್ಮನ್ನು ಕೆಳಗೆ ತುಳಿಯಲು ಯತ್ನಿಸುತ್ತವೆ. ಸಮಾಜ ಹಾಗೂ ರಾಜಕಾರಣಿಗಳು ನಮ್ಮನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಒಂದು ಫೈಲ್‌ಗೆ ಸಹಿ ಹಾಕುವ ಸಮಯ ಸಾಮಾನ್ಯ ವ್ಯಕ್ತಿಗೆ ಸಿಕ್ಕಿರುವಷ್ಟೇ ಇರುತ್ತದೆ.

ಅದನ್ನು ಸಮಯಕ್ಕೆ ಸರಿಯಾಗಿ ವರ್ಗಾವಣೆ ಮಾಡದಿದ್ದರೆ ವಹಿಸಿದ ಕೆಲಸಕ್ಕೆ ಅನ್ಯಾಯ ಮಾಡುತ್ತಿದ್ದೀರಿ ಎಂದರ್ಥ ಎಂದರು.

ಜಗತ್ತು ಅಪಾಯಕಾರಿ ಸ್ಥಿತಿಯಲ್ಲಿದೆ. ವಿಶ್ವ ಯುದ್ಧದ ಭೀತಿಯನ್ನು ಎಲ್ಲರೂ ಅನುಭವಿಸುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮ್ಮ ಹೊಣೆಗಾರಿಕೆ ಏನೆಂಬುದನ್ನು ಅರಿಯಬೇಕು. ಎಲ್ಲವನ್ನೂ ಮತ ಮಾನ್ಯಗಳೇ ಮಾಡುವುದಾದರೆ ನಮ್ಮ ಜವಾಬ್ದಾರಿ ಏನೆಂಬುದನ್ನು ಅರಿಯಬೇಕು. ಮಕ್ಕಳನ್ನು ಹುಷಾರಾಗಿ ಬೆಳೆಸಬೇಕು. ಸಮಾಜಕ್ಕೆ ಒಳ್ಳೆಯ ಕೊಡುಗೆ ನೀಡುವಂತಾಗಬೇಕು ಎಂದು ಕಿವಿಮಾತು ಹೇಳಿದರು.

### ಸಮಾಜ ಸೇವೆ ಆದ್ಯತೆಯಾಗಲಿ

ಮಾಜಿ ಉಪಮುಖ್ಯಮಂತ್ರಿ ಡಾ. ಅಶ್ವತ್ ನಾರಾಯಣ್ ಮಾತನಾಡಿ, ಉತ್ತಮ ವೃತ್ತಿ ಮಾಡಬೇಕೆನ್ನುವುದು ಎಲ್ಲರ ಕನಸಾಗಿರುತ್ತದೆ. ಪ್ರತಿಯೊಬ್ಬರು ಗೌರವ, ಅಭಿಮಾನ ಗಳಿಸಿಕೊಳ್ಳಬೇಕು. ಜೀವನದಲ್ಲಿ ಯಾವತ್ತೂ ಆಸಕ್ತಿ ಕಳೆದುಕೊಳ್ಳಬಾರದು ಎಂದರು.

ನಾವು ಚಿಕ್ಕವರಾಗಿದ್ದಾಗ ಏನೇನೋ ಕನಸು ಕಂಡಿರುತ್ತೇವೆ. ದೊಡ್ಡವರಾದ ಮೇಲೆ ಅಂದುಕೊಂಡ ಹಾಗೆ ಬದುಕಲು ಆಗುವುದಿಲ್ಲ. ಯಾವುದೇ ಕೆಲಸ ಆಯ್ದುಕೊಂಡರು ಅದನ್ನು ಪ್ರೀತಿಸಬೇಕು, ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸಬೇಕು ಎಂದರು.

ಯುಪಿಎಸ್ ಪರೀಕ್ಷೆ ಪಾಸು ಮಾಡಿರುವ ಸಮುದಾಯದ ಯುವಕ-ಯುವತಿಯರು ಸಮಾಜ ಹಿತ ದೃಷ್ಟಿಯಿಂದ ಕೆಲಸ ಮಾಡಬೇಕು. ಸಮಾಜ ಚೆನ್ನಾಗಿದ್ದರೆ ನಾವು ಚೆನ್ನಾಗಿರುತ್ತೇವೆ. ಸಮಾಜಕ್ಕೆ ಸಾಮಾನ್ಯ ವ್ಯಕ್ತಿಗಳಿಂದ ಕೆಡುಕಾಗುತ್ತಿಲ್ಲ. ಬದಲಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವವರಿಂದಲೇ ತಪ್ಪುಗಳಾಗುತ್ತಿವೆ. ಅಂತಹ ಪ್ರಮಾದವನ್ನು ಯಾರೂ ಮಾಡಬಾರದು. ಯಾರದೊ ಮೆಚ್ಚುಗೆ ಪಡೆಯಲು ಕೆಲಸ ಮಾಡಬಾರದು. ಆತ್ಮಸಾಕ್ಷಿ ಒಪ್ಪುವಂತಹ ಕೆಲಸ ಮಾಡಬೇಕು ಎಂದರು.

ರಾಜ್ಯ ಸರ್ಕಾರದ ಉನ್ನತ ಹುದ್ದೆಗಳಲ್ಲಿ ತಮಿಳುನಾಡು, ಆಂಧ್ರ, ಕೇರಳ, ಉತ್ತರ ಭಾರತ ರಾಜ್ಯಗಳ ಅಧಿಕಾರಿಗಳೇ ತುಂಬಿ ತುಳುಕುತ್ತಿದ್ದಾರೆ. ಇಲ್ಲಿ ಕರ್ನಾಟಕದ ಲಾಬಿ ಇಲ್ಲವಾಗಿದೆ. ಇದನ್ನೆಲ್ಲ ನೋಡಿದಾಗ ನಾವು ಅಸಹಾಯಕರು ಎನಿಸಿಕೊಳ್ಳುತ್ತೇವೆ. ದೇಶದ ಬಹುತೇಕ ಐಟಿ ಪದವೀಧರರು ಬೆಂಗಳೂರಿನಲ್ಲಿ ಇದ್ದಾರೆಯಾದರೂ ಅಲ್ಲಿ ಐಟಿ ಇಲ್ಲ ಎಂದರು.

# ಸಿಎಂ-ಡಿಸಿಎಂ ರಾಜೀನಾಮೆ ನೀಡಲಿ: ಅಶ್ವತ್ ನಾರಾಯಣ್




ಹಾಸನ: ಅಹಮ್ಮದಾಬಾದ್‌ನ ವಿಮಾನ ದುರಂತ ಹೊಣೆ ಹೊತ್ತು ಪ್ರಧಾನಮಂತ್ರಿ ರಾಜೀನಾಮೆ ನೀಡುವುದಾದರೆ ಬೆಂಗಳೂರಿನ ಕಾಲ್ತುಳಿತ ಪ್ರಕರಣಕ್ಕೆ ರಾಜ್ಯ ಸರ್ಕಾರವೇ ಕಾರಣ. ಇವರಿಗೆ ಆತ್ಮಸಾಕ್ಷಿ ಇದ್ದರೆ ಸಿಎಂ, ಡಿಸಿಎಂ ರಾಜೀನಾಮೆ ನೀಡಲಿ ಎಂದು ಮಾಜಿ ಸಚಿವ ಡಾ. ಸಿ.ಎನ್.ಅಶ್ವತ್ ನಾರಾಯಣ್ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ವಿಮಾನ ದುರಂತಕ್ಕೆ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ದುರಂತಕ್ಕೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಿದೆ. ವಿಮಾನ ಪತನಕ್ಕೆ ಏನಾಗಿದೆ ಎಂಬುದು ತನಿಖೆಯಲ್ಲಿ ತಿಳಿಯುತ್ತದೆ. ಅದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಏನಿದೆ ಎಂಬುದು ಗೊತ್ತಾಗುತ್ತೆ. ರಾಜ್ಯದಲ್ಲಿ ನಡೆದ ಕಾಲ್ತುಳಿತದ ಪ್ರಕರಣದ ತನಿಖೆಯನ್ನು ಮುಕ್ತವಾಗಿ ಮಾಡಲಿ. ಕಾಲ್ತುಳಿತ ಪ್ರಕರಣಕ್ಕೆ ನೇರವಾಗಿ ಸರ್ಕಾರನೇ ಕಾರಣ. ಸಚಿವ ಈಶ್ವರ್ ಖಂಡ್ರೆಗೆ ಆತ್ಮಸಾಕ್ಷಿ ಇದ್ದರೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ರಾಜೀನಾಮೆ ನೀಡಲು ಹೇಳಿ ಎಂದು ಸವಾಲು ಹಾಕಿದರು.

ಜೆಡಿಎಸ್-ಬಿಜೆಪಿ ಮೈತ್ರಿ ಒಗ್ಗಟ್ಟಿನಿಂದ ಇವೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಮೈತ್ರಿಯನ್ನು ಪರಸ್ಪರ ವಿಶ್ವಾಸದಿಂದ ಮಾಡಿದ್ದಾರೆ. ದ್ರೋಹ ಮಾಡುವಂತಹ ಕೆಲಸ ನಮ್ಮಿಂದ ಆಗುವುದಿಲ್ಲವೆಂದು ಅವರು ತಿಳಿಸಿದರು.

ಸ್ಥಳೀಯ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಯಂತೆ ನಡೆದುಕೊಂಡಿಲ್ಲ ಎಂಬ ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ಆರೋಪಕ್ಕೆ ಪ್ರತಿಕ್ರಿಯಿಸಿ, ಮೈತ್ರಿಯನ್ನು ಪರಸ್ಪರ ವಿಶ್ವಾಸದಿಂದ ಮಾಡಲಾಗಿದೆ. ಅದೇ ರೀತಿ ಅವರನ್ನು ಗೌರವಿಸುತ್ತೇವೆ ಮತ್ತು ಒಗ್ಗಟ್ಟಿನಿಂದ ಮುಂದೆ ಸಾಗುತ್ತೇವೆ. ಹಾಗಾಗಿ ಮೈತ್ರಿ ಇನ್ನಷ್ಟು ಬಲಿಷ್ಠವಾಗುತ್ತದೆ ಎಂದು ಹೇಳಿದರು.

ಬಿಜೆಪಿ ನೂತನ ರಾಜ್ಯಾಧ್ಯಕ್ಷರ ಆಯ್ಕೆ ಬಗ್ಗೆ ಪ್ರತಿಕ್ರಿಯಿಸಿ, ಈಗಾಗಲೇ ಜಿಲ್ಲಾಧ್ಯಕ್ಷರ ನೇಮಕವಾಗಿದೆ. ಸದ್ಯದಲ್ಲೇ ರಾಜ್ಯಾಧ್ಯಕ್ಷರ ಆಯ್ಕೆ ನಿಶ್ಚಯವಾಗಬಹುದೆಂದು ಎದುರು ನೋಡುತ್ತಿದ್ದೇವೆ. ಪಕ್ಷದ ವರಿಷ್ಠರು ಯಾರನ್ನ ನೇಮಕ ಮಾಡುತ್ತಾರೆ ಅವರನ್ನು ಸ್ವಾಗತಿಸಿ, ಅವರಿಗೆ ಸಹಕಾರ ಕೊಟ್ಟು ಒಗ್ಗಟ್ಟಿನಿಂದ ಮುಂದೆ ಸಾಗುತ್ತೇವೆ. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಅರ್ಜಿ ಹಾಕಬೇಕು, ಪ್ರಜಾಪ್ರಭುತ್ವದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ನಡೆಯುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಸಚಿವ ಸಂಪುಟ ಭ್ರಷ್ಟಾಚಾರದಲ್ಲಿ ಸಂಪೂರ್ಣವಾಗಿ ತೊಡಗಿದೆ, ಇವರಿಂದ ನಾವೇನು ಬಯಸಲು ಆಗಲ್ಲ. ಕಾಂಗ್ರೆಸ್‌ಗೆ ಅಧಿಕಾರ ಕೊಟ್ಟು ಜನರು ಬಹಳ ಬೇಸರದಲ್ಲಿದ್ದಾರೆ. ಇಂತಹ ಕೆಟ್ಟ ಜನವಿರೋಧಿ ಸರ್ಕಾರ ನಮ್ಮ ರಾಜ್ಯದಲ್ಲಿ ಆಡಳಿತ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

# ಇಂದಿರಾ ನಗರ ಬಡಾವಣೆ ಜನರ ಸಮಸ್ಯೆ ಬಗೆಹರಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಸೀಕೆರೆ: ಜನರ ಕುಂದು, ಕೊರತೆ ಆಲಿಸಿ ಪರಿಹರಿಸುವ ಹೊಣೆಗಾರಿಕೆ ತಮ್ಮ ಮೇಲಿದೆ ಎಂಬುದನ್ನು ಅಧಿಕಾರಿಗಳು ಮರೆಯಬಾರದು ಎಂದು ಮಾಜಿ ಸಚಿವ ಬಿ. ಶಿವರಾಂ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಂದಿರಾ ನಗರ ಬಡಾವಣೆಯಲ್ಲಿ ರಾಜ್ಯ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮಂಜೂರಾದ ಮನೆಗಳನ್ನು ಸ್ವತಹಃ ಫಲಾನುಭವಿಗಳೇ ನಿರ್ಮಿಸಿಕೊಂಡಿದ್ದಾರೆ. ಗುತ್ತಿಗೆದಾರ ಖಾಲಿ ಚೆಕ್ ಕೊಟ್ಟು ನಾಪತ್ತೆಯಾಗಿದ್ದಾರೆ. ಸಂಬಂಧಿಸಿದ ಅಧಿಕಾರಿಗಳೂ ಕೂಡ ಸಮಸ್ಯೆ ಇತ್ಯರ್ಥಕ್ಕೆ ಪ್ರಯತ್ನ ನಡೆಸಿಲ್ಲ ಎಂದರು.

ಕೊಳಗೇರಿ ಮಂಡಳಿ ಆಯುಕ್ತ ಡಾ. ಅಶೋಕ್ ಅವರಿಗೆ ಕರೆ ಮಾಡಿದ ಬಿ. ಶಿವರಾಂ, ಸರ್ಕಾರದ ಯೋಜನೆಗಳ ಸಾಫಲ್ಯ ಅಧಿಕಾರಿಗಳ ಮೇಲಿದೆ. ಮನೆಗಳ ನಿರ್ಮಾಣ ಹೊಣೆ ಹೊತ್ತಿರುವ ಗುತ್ತಿಗೆದಾರ ಹಾಗು ಇಂಜಿನಿಯರ್ ಬಳಿ ಚರ್ಚಿಸಿ ಲೋಪ ಸರಿಪಡಿಸಿ ಫಲಾನುಭವಿಗಳಿಗೆ ನ್ಯಾಯ ಒದಗಿಸಿ ಎಂದು ತಾಕೀತು ಮಾಡಿದರು. ಶೀಘ್ರದಲ್ಲೇ ಸಭೆ ನಡೆಸಿ ನೆರವಿನ ಚೆಕ್ ವಿತರಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಬಿ.ಶಿವರಾಂ ದೂರುದಾರರಿಗೆ ಮನವರಿಕೆ ಮಾಡಿದರು.

ಬೇಲೂರು ವಿಧಾನಸಭಾ ಕ್ಷೇತ್ರದ ಜಾವಗಲ್ ಹೋಬಳಿಯ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜನರ ಸಂಕಷ್ಟ ಆಲಿಸಿ ಪರಿಹಾರ ಒದಗಿಸಬೇಕು. ನೊಂದವರಿಗೆ ನ್ಯಾಯ ದೊರಕಿಸಿ ಕೊಟ್ಟರೆ ಸೇವೆಗೆ ಸಾರ್ಥಕತೆ ಬರಲಿದೆ. ಜನರು ರಾಜಕಾರಣಿಗಳ ಬಳಿ ಸಮಸ್ಯೆ ಹೇಳಲು ಬರದಂತೆ ನೋಡಿಕೊಳ್ಳಿ. ಆಗ ನಿಮಗೂ ಗೌರವ ಹೆಚ್ಚಲಿದೆ ಎಂದು ಸೂಚ್ಯವಾಗಿ ಹೇಳಿದರು.

ದುಮ್ಮೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಜಯ್, ಮುಖಂಡರಾದ ಹಂದ್ರಾಳು ಶ್ರೀನಿವಾಸ್, ಪಂಚಾಕ್ಷರಿ, ಯೂನಿಸ್, ಅಯ್ಯಪ್ಪ, ದೇವರಾಜ್ ಹಾಗೂ ಇತರರಿದ್ದರು.

# ಬಾಲ ಕಾರ್ಮಿಕ ಪದ್ಧತಿ ಜೀವಂತ ಖಂಡನೀಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಚನ್ನರಾಯಪಟ್ಟಣ: ಭಾರತವು ವಿಶ್ವ ಮಟ್ಟದಲ್ಲಿಯೇ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಆದರೆ ಇನ್ನೂ ಬಾಲಕಾರ್ಮಿಕ ಪದ್ಧತಿ ಹೋಗಲಾಡಿಸಲು ಸಾಧ್ಯವಾಗುತ್ತಿಲ್ಲ ಎಂದು ನುಗ್ಗೇಹಳ್ಳಿ ಪಿಎಸ್‌ಐ ಭರತ್ ರೆಡ್ಡಿ ಹೇಳಿದರು.

ನುಗ್ಗೇಹಳ್ಳಿ ಗ್ರಾಮದಲ್ಲಿ ಚನ್ನರಾಯಪಟ್ಟಣ ಪೂರ್ಣಚಂದ್ರ ಪಬ್ಲಿಕ್ ಶಾಲೆ ಹಾಗೂ ಮಲ್ನಾಡ್ ಅಂತಾರಾಷ್ಟ್ರೀಯ ಶಾಲೆ ವತಿಯಿಂದ ಹಮ್ಮಿಕೊಂಡಿದ್ದ ಬಾಲ ಕಾರ್ಮಿಕ ಪದ್ಧತಿ ವಿರೋಧ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದರು.

ಬಾಲ ಕಾರ್ಮಿಕ ಪದ್ಧತಿಗೆ ಎಂದಿಗೂ ಕೊನೆಯೇ ಇಲ್ಲವೇ. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿದೆ.

ಆದರೆ ಕೆಲ ಬಡ ಕುಟುಂಬಗಳ ಸದಸ್ಯರು ಜೀವನ ನಡೆಸುವ ಬದಲು ಮಕ್ಕಳಿಗೆ ಶಿಕ್ಷಣ ಕೊಡಿಸದೆ ಜೀತ ಪದ್ಧತಿಗೆ ದೂಡುತಿದಾರೆ. ಇದರಿಂದ ಅಂತಹ ಮಕ್ಕಳ ಭವಿಷ್ಯದ ಮೇಲೆ ಕತ್ತಲು ಆವರಿಸಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಾಲಕಾರ್ಮಿಕ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದರೆ ಸಂಪೂರ್ಣವಾಗಿ ಬಾಲ ಕಾರ್ಮಿಕ ಪದ್ಧತಿಯನ್ನು ಬೇರು ಸಮೇತ ಕಿತ್ತು ಹಾಕಬಹುದಾಗಿದೆ. ಎರಡು ಶಾಲೆಯ ಮಕ್ಕಳು ಹೆಚ್ಚು ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂದರು.

ಪೂರ್ಣಚಂದ್ರ ಪಬ್ಲಿಕ್ ಶಾಲೆ ಹಾಗೂ ಮಲ್ನಾಡ್ ಅಂತಾರಾಷ್ಟ್ರೀಯ ಶಾಲೆಯ ಮಕ್ಕಳಿಂದ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಜಾಥ ನಡೆಸಿ ನಂತರ ಹೋಬಳಿ ಕೇಂದ್ರದ ಕೆಲವು ಕಡೆಗಳಲ್ಲಿ ಬಾಲಕಾರ್ಮಿಕ ವಿರೋಧಿ ಜಾಗೃತಿ ಸಲುವಾಗಿ ಕಿರು ನಾಟಕಗಳನ್ನು ಮಕ್ಕಳು ನಡೆಸಿಕೊಟ್ಟರು.

ಪೂರ್ಣಚಂದ್ರ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಧನಲಕ್ಷ್ಮಿ, ಮಲ್ನಾಡ್ ಅಂತರಾಷ್ಟ್ರೀಯ ಶಾಲೆಯ ಪ್ರಾಂಶುಪಾಲೆ ಸಾವಿತ್ರಿ, ಶಿಕ್ಷಕರಾದ ಮಂಜುನಾಥ್, ರವಿ ನಾಯಕ್, ಭಾವನ, ಚೇತನ್, ಕವಿತಾ, ವಿವೇಕ್, ಸೇರಿದಂತೆ ಇತರರು ಹಾಜರಿದ್ದರು.

# ಕಾರ್ಮಿಕರ ಅಚಾತುರ್ಯ ಎರಡು ಎಕರೆ ಕಾಫಿ ಗಿಡ ನಾಶ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಕಾಫಿ ತೋಟದ ಕೆಲಸದಲ್ಲಿ ಕಾರ್ಮಿಕರ ಅಚಾತುರ್ಯದಿಂದ ಸಿಂಪಡಿಸುವ ಔಷಧಿಯ ಬದಲು ಕಳೆನಾಶಕವನ್ನು ಸಿಂಪಡಿಸಿ 2 ಎಕರೆ ಕಾಫಿ ಗಿಡವು ಸುಟ್ಟು ಕರಕಲಾಗಿದ್ದು, ಸುಮಾರು 6 ಲಕ್ಷಕ್ಕೂ ಹೆಚ್ಚು ಕಾಫಿ ಬೆಳೆ ಸಂಪೂರ್ಣ ನಾಶವಾಗಿದೆ. ತಾಲ್ಲೂಕಿನ ಯಸಳೂರು ಹೋಬಳಿ ಯಡಿಕೆರೆ ಗ್ರಾಮದ ಕಾಫಿ ಬೆಳೆಗಾರರಾದ ವೈ.ಕೆ. ಸುಬ್ಬೆಗೌಡರ ಎರಡು ಎಕರೆ ತೋಟದಲ್ಲಿ ರೋಬೊಸ್ಟ್ ಕಾಫಿ ಬೆಳೆಗೆ ಮಳೆಗಾಲದಲ್ಲಿ ಉತ್ತಮ ಫಸಲು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕಾಂಟಪ್ ಔಷಧಿ ಸಿಂಪಡಿಸುವ ಯೋಚನೆಯಲ್ಲಿದರು. ಜೋರು ಮಳೆ ಇದ್ದ ಕಾರಣ ಔಷಧೀಯ ಜೊತೆಗೆ ಅಂಟು ದ್ರವಣ ಮಿಶ್ರಣ ಮಾಡಿ ಸಿಂಪಡಿಸಲು ವೈ.ಕೆ. ಸುಬ್ಬೆಗೌಡರು ಹೊರಗಿನಿಂದ ಬಂದ ಕೂಲಿ ಕಾರ್ಮಿಕರಿಗೆ ಗುತ್ತಿಗೆ ನೀಡಿದ್ದರು. ಕೂಲಿ ಕಾರ್ಮಿಕರಿಗೆ ಒಂದೇ ಕೊಠಡಿಯಲ್ಲಿ ಅಂಟು ದ್ರವದ ಹಾಗೂ ಕಳೆ ನಾಶಕವನ್ನು ಇಟ್ಟಿದ್ದು ಸರಿಯಾಗಿ ತಿಳಿಯದೆ ಅಂಟು ದ್ರವಣದ ಬದಲು ಕಳೆನಾಶಕವನ್ನು ಸೇರಿಸಿ ಕಾಫಿ ಗಿಡಕ್ಕೆ ಔಷಧಿಯನ್ನು ಸಿಂಪಡಿಸಲಾಗಿದೆ. ಇದರಿಂದ ಫಸಲಿಗೆ ಬಂದ ಸುಮಾರು 6 ಲಕ್ಷ ರೂ. ಮೌಲ್ಯದ ಕಾಫಿ ಹಾಗೂ ರೋಬಸ್ಟ ಗಿಡ ಸಂಪೂರ್ಣ ನಾಶವಾಗಿದೆ. ಕಾಫಿ ತೋಟಕ್ಕೆ ವಲಳಹಳ್ಳಿ ಗ್ರಾಮ ಪಂಚಾಯಿತಿ ಬೆಳೆಗಾರರ ಸಂಘದವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಫಿ ಮಂಡಳಿಯ ಅಧಿಕಾರಿ ಜೊತೆ ಮಾತನಾಡಿ, ಮುಂದಿನ ಕ್ರಮಕ್ಕೆ ವಿಜ್ಞಾನಿಗಳಿಂದ ಕೈಗೊಳ್ಳಬೇಕಾದ ಸೂಕ್ತ ಕ್ರಮವನ್ನು ಕೇಳಿ ಅದನ್ನು ಮಾಲೀಕರಿಗೆ ತಿಳಿಸುವುದರೊಂದಿಗೆ ಔಷಧಿಯ ವೆಚ್ಚವನ್ನು ವಳಲಹಳ್ಳಿ ಬೆಳೆಗಾರರ ಸಂಘದವರು ಭರಿಸುವುದಾಗಿ ಹೆಚ್‌ಡಿಪಿಎ ಮಾಜಿ ಸಂಘಟನಾ ಕಾರ್ಯದರ್ಶಿ ಕೆ. ಪಿ.ಕೃಷ್ಣೆಗೌಡ ಹಾಗೂ ವಳಲಹಳ್ಳಿ ಗ್ರಾಮ ಪಂಚಾಯಿತಿ ಬೆಳೆಗಾರರ ಸಂಘದ ಖಜಾಂಚಿ ಹಿರದನಹಳ್ಳಿ ಹೂವಣ್ಣಗೌಡ ಭರವಸೆ ನೀಡಿ ಸಾಂತ್ವನ ಹೇಳಿದರು.

ವಳಲಹಳ್ಳಿ ಗ್ರಾಮ ಪಂಚಾಯಿತಿ ಬೆಳೆಗಾರರ ಸಂಘದ ಅಧ್ಯಕ್ಷ ಎಂ.ಕೆ. ದರ್ಶನ್, ಗೌರವ ಅಧ್ಯಕ್ಷ ವಿ.ಬಿ. ರಮೇಶ್, ಕಾರ್ಯದರ್ಶಿ ಅರುಣ್ ಗೌಡ, ನಿರ್ದೇಶಕರಾದ ವಸಂತ್ ಬೊಮ್ಮನಕೆರೆ ಹಾಗೂ ಆದರ್ಶ ಉಪಸ್ಥಿತರಿದ್ದರು.

# ಕನ್ನಡ ಕೇವಲ ಭಾಷೆಯಲ್ಲ ಬದುಕಿನ ಭಾವನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಚನ್ನರಾಯಪಟ್ಟಣ: ಕನ್ನಡ ಎಂಬುದು ಕೇವಲ ಭಾಷೆಯಷ್ಟೇ ಅಲ್ಲ ನಮ್ಮೆಲ್ಲರ ಭಾವನೆ ಹಾಗೂ ಸಂಸ್ಕೃತಿಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಎನ್. ದೀಪ ಹೇಳಿದರು.

ತಾಲೂಕಿನ ಹಿರೀಸಾವೆ ಗ್ರಾಮದ ಸರ್ಕಾರಿ ಬಾಲಕೀಯರ ಪ್ರೌಢಶಾಲೆ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕದಿಂದ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಭಾಷೆಗೆ ತನ್ನದೇ ಆದ ವಿಶೇಷ ಸ್ಥಾನಮಾನವಿದೆ. ಈ ವರ್ಷದ ಬೂಕರ್ ಪ್ರಶಸ್ತಿ ನಮ್ಮ ಕನ್ನಡಕ್ಕೆ ಅದರಲ್ಲಿಯೂ ಹಾಸನದವರಿಗೆ ಲಭಿಸಿರುವುದು ವಿಶೇಷ ಸಂಗತಿ. ಕನ್ನಡ ನಾಡು ದೇಶಕ್ಕೆ ಪ್ರಧಾನ ಮಂತ್ರಿ, ಕವಿ, ಸಾಹಿತಿ, ಕ್ರೀಡಾಪಟು, ವಿಜ್ಞಾನಿ ಸೇರಿದಂತೆ ಹಲವಾರು ಪ್ರತಿಭೆಗಳನ್ನು ಕೊಡುಗೆಯಾಗಿ ನೀಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲ್ಲೂಕಿನ 47 ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದಿರುವುದು ಹೆಮ್ಮೆಯ ಸಂಗತಿ. ಇತ್ತೀಚಿನ ವರ್ಷಗಳಿಂದ ಮಕ್ಕಳಿಗೆ ಓದಿನ ಕಡೆಗೆ ಹೆಚ್ಚಿನ ಒಲವು ಇರುವುದು ಕಂಡುಬರುತ್ತಿದೆ ಎಂದರು.

ನಿವೃತ್ತ ಶಿಕ್ಷಣಾಧಿಕಾರಿ ತಮ್ಮಣ್ಣಗೌಡ ಮಾತನಾಡಿ, ಶೈಕ್ಷಣಿಕ ಹಂತದಿಂದಲೇ ವಿದ್ಯಾರ್ಥಿಗಳಿಗೆ ಸಂಸ್ಕಾರ ಕಲಿಸುವುದು ಅಗತ್ಯ. ಜತೆಗೆ ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳಲ್ಲಿ ಧೈರ್ಯ, ಆತ್ಮಸ್ಥೈರ್ಯ ಹಾಗೂ ಸಮಾಜದಲ್ಲಿ ನಿಂತು ಮಾತನಾಡುವ ಸಾಮರ್ಥ್ಯ ಹೆಚ್ಚಾಗಿರುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕದ ಅಧ್ಯಕ್ಷ ಎಚ್.ಎ.ಪ್ರಮೋದ್ ಮಾತನಾಡಿ, ಬಿಡುವಿನ ವೇಳೆಯಲ್ಲಿ ಕಥೆ, ಕಾದಂಬರಿ ಹಾಗೂ ಇತಿಹಾಸ ತೆರೆದಿಡುವ ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಇದರಿಂದ ನಿಮ್ಮಲ್ಲಿ ಜ್ಞಾನ ಬೆಳೆಯುತ್ತದೆ. ಶಿಕ್ಷಣವಂತರು ಹಾಗೂ ಜ್ಞಾನವಂತರು ಹೆಚ್ಚಿದಂತೆಲ್ಲ ಸಮಾಜದಲ್ಲಿ ಹೊಸ ಬದಲಾವಣೆ ಮೂಡಲಿದೆ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಶಿಕ್ಷಣ ಎಂಬುದು ಭವಿಷ್ಯದ ಮೆಟ್ಟಿಲು ಹಾಗೂ ಬದುಕಿನ ದಿಕ್ಸೂಚಿಯಾಗಲಿದೆ. ಕೇವಲ ಹೆಚ್ಚು ಹೆಚ್ಚು ಅಂಕ ಗಳಿಸುವುದೇ ಮುಖ್ಯವಲ್ಲ. ಶಿಕ್ಷಣವನ್ನು ಬದುಕಿನ ಬೆಳಕಾಗಿ ಪರಿವರ್ತಿಸಿಕೊಳ್ಳಬೇಕು. ಉನ್ನತ ಹುದ್ದೆಗಳನ್ನು ಹರಸಿ ಓದುವ ಬದಲು ಜ್ಞಾನಾರ್ಜನೆ ಸಲುವಾಗಿ ಶಿಕ್ಷಣವನ್ನು ದೀಕ್ಷೆಯಾಗಿ ಸ್ವೀಕರಿಸಿ. ಇದರಿಂದ ನಿಮ್ಮ ಬದುಕಿನ ಜತೆಗೆ ಸಮಾಜವು ಸಹ ಪ್ರಗತಿ ಕಾಣಲಿದೆ ಎಂದರು.

ಪ್ರಸ್ತುತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ 39 ಹಾಗೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ಇಬ್ಬರು ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಭಿನಂದಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಉಪಾಧ್ಯಕ್ಷ ಮಲ್ಲೇಶ್‌ಗೌಡ, ಕಾರ್ಯದರ್ಶಿ ಜಬಿವುಲ್ಲಾ ಬೇಗ್, ಹೋಬಳಿ ಘಟಕದ ನಿಕಟಪೂರ್ವ ಅಧ್ಯಕ್ಷ ಎಚ್.ಪಿ.ಶಂಕರ್, ಖಜಾಂಚಿ ಟಿ.ಪಿ.ಮಂಜು, ಡಯಟ್ ಉಪನ್ಯಾಸಕ ತಮ್ಮಣ್ಣಗೌಡ, ಕಸಾಪ ಪದಾಧಿಕಾರಿಗಳಾದ ಗೋವಿಂದಯ್ಯ, ಮಾರುತಿ ಮಂಜು, ಜೀವಿ ಗೋವಿಂದರಾಜ್, ದಾಸರಹಳ್ಳಿ ಕುಮಾರ್, ಪುರುಷೋತ್ತಮ್, ಭಾರತಿ, ಮಾದಲಗೆರೆ ನಂಜೇಗೌಡ, ಶಾಲಾ ಮುಖ್ಯಶಿಕ್ಷಕ ರಾಮೇಗೌಡ, ಶಿಕ್ಷಕ ಲೋಕೇಶ್, ವಿದ್ಯಾರ್ಥಿಗಳು ಹಾಗೂ ಇತರರು ಇದ್ದರು.

# ಕೃಷಿ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ವಿಪರೀತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೃಷಿ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಮಿತಿ ಮೀರಿದ್ದು ಇರುವ ಅಲ್ಪ ಸಿಬ್ಬಂದಿಯಿಂದಲೇ ಕೆಲಸ ಮಾಡಿಸಿಕೊಳ್ಳುವ ಇಕ್ಕಟ್ಟಿಗೆ ಮೇಲಧಿಕಾರಿಗಳು ಸಿಲುಕಿದ್ದು ಅಭಿವೃದ್ಧಿಗೆ ಗರ ಬಡಿದಂತಾಗಿದೆ.

ಕಚೇರಿ ಕೆಲಸ ಮಾತ್ರವಲ್ಲದೆ ಫಸಲ್ ಬೀಮಾ ಯೋಜನೆ ಪ್ರಚಾರ, ಮುಸುಕಿನ ಜೋಳಕ್ಕೆ ಕಾಣಿಸಿಕೊಂಡಿರುವ ಬಿಳಿ ಸುಳಿ ರೋಗ ಸಮೀಕ್ಷೆ, ಬೆಳೆ ನಷ್ಟ ಪರಿಶೀಲನೆ, ಕೃಷಿ ಜಾಗೃತಿ ದಳ, ದತ್ತಾಂಶ ಸಂಗ್ರಹ, ಮಣ್ಣು ಪರೀಕ್ಷೆ, ರೈತರಿಗೆ ಅರಿವು ಕಾರ್ಯಕ್ರಮ ಹೀಗೆ ನಾನಾ ಯೋಜನೆಯಡಿ ಕೃಷಿ ಇಲಾಖೆಯ ಪಾತ್ರ ಮಹತ್ವದ್ದಾಗಿದೆ. ಈ ಎಲ್ಲಾ ಕೆಲಸ ಮಾಡಲು ಸಿಬ್ಬಂದಿ ಬೇಕು. ಆದರೆ ಹಲವು ವರ್ಷಗಳಿಂದ ಖಾಲಿ ಹುದ್ದೆಗಳ ಭರ್ತಿ ಮಾಡದೆ ಇರುವುದರಿಂದ ಸಮಸ್ಯೆ ತಾರಕಕ್ಕೇರಿದೆ.



## 76 ಹೊರ ಗುತ್ತಿಗೆ ನೌಕರರು

ಈ ನಡುವೆ ಕೃಷಿ ಇಲಾಖೆಯಲ್ಲಿ 76 ಜನರು ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಬಿಎಸ್‌ಸಿ ಅಗ್ರಿ ವ್ಯಾಸಂಗ ಪೂರ್ಣಗೊಳಿಸಿರುವ ಯುವಕ-ಯುವತಿಯರನ್ನು ಮೆರಿಟ್ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆಯಾದರೂ ಸಿಬ್ಬಂದಿ ಕೊರತೆ ನೀಗಿಸಲು ಸಾಧ್ಯವಾಗಿಲ್ಲ. ಕೃಷಿ ಇಲಾಖೆ ಮಾತ್ರವಲ್ಲದೆ ತೋಟಗಾರಿಕೆಯಲ್ಲೂ ಇದೇ ಪರಿಸ್ಥಿತಿಯಿದ್ದು ಏನೂ ಮಾಡದಂತಾಗಿದೆ. ಇನ್ನು ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಸದ್ಯ ಅಸಾಧ್ಯ ಎಂಬ ಪರಿಸ್ಥಿತಿ ಇದೆ. ಈ ಸಂಬಂಧ ಕೃಷಿ ಇಲಾಖೆ ಸಚಿವರು ಅಥವಾ ಸರ್ಕಾರ ಯಾವುದೇ ಆದೇಶ ಹೊರಡಿಸಿಲ್ಲ. ಹೀಗಾಗಿ ಖಾಯಂ ನೌಕರರು ಬರುವುದು ಕನಸಿನ ಮಾತು.

## ಯಾವ ಹುದ್ದೆಗಳು ಖಾಲಿ

ಜಿಲ್ಲಾದ್ಯಂತ 43 ಕೃಷಿ ಅಧಿಕಾರಿಗಳ ಹುದ್ದೆ ಮಂಜೂರಾಗಿದ್ದರೂ 21 ಸ್ಥಾನ ಮಾತ್ರ ಭರ್ತಿಯಾಗಿದೆ. ಸಹಾಯಕ ಕೃಷಿ ಅಧಿಕಾರಿ, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಶೀಘ್ರ ಲಿಪಿಗಾರರು, ರೇಖಾಗಾರರು, ಮೇಲ್ವಿಚಾರಕರು, ಬೆರಳಚ್ಚುಗಾರರು, ವಾಚ್‌ಮ್ಯಾನ್, ಬಾಣಸಿಗ, ಡಿ ದರ್ಜೆ, ಬೀಜಕ್ಷೇತ್ರ ವಿಭಾಗದಲ್ಲಿ ಹಲವು ಹುದ್ದೆಗಳು ಖಾಲಿ ಇದ್ದು ಇರುವ ನೌಕರರಿಗೆ ಕೆಲಸ ಹೊರೆ ಹೆಚ್ಚಿದೆ. ಜಿಲ್ಲೆ 2.50 ಲಕ್ಷ ಹೆಕ್ಟೇರ್ ಕೃಷಿ ಬಿತ್ತನೆ ಪ್ರದೇಶ ಹೊಂದಿದೆ. ಮುಸುಕಿನ ಜೋಳ, ರಾಗಿ, ಭತ್ತ, ಅಲಸಂದೆ, ಉದ್ದು, ಹೆಸರು, ಕಬ್ಬು ಮತ್ತಿತರ ಮುಖ್ಯ ಬೆಳೆಯನ್ನು ಇಲ್ಲಿ ಬೆಳೆಯಲಾಗುತ್ತಿದೆ. ಕೃಷಿ ಪ್ರಧಾನ ಜಿಲ್ಲೆಯಾಗಿರುವ ಹಾಸನದಲ್ಲಿ ಸಿಬ್ಬಂದಿ ನೇಮಕಕ್ಕೆ ಪಾರ್ಶ್ವವಾಯು ಹೊಡೆದಿರುವುದು ಅನ್ನದಾತರನ್ನು ಕಂಗೆಡಿಸಿದೆ. ಪ್ರಮುಖ ಇಲಾಖೆಗೆ ಸಿಬ್ಬಂದಿ ಕೊರತೆ ಕಾಡುತ್ತಿರುವುದು ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ.

## 232 ಹುದ್ದೆ ಖಾಲಿ

ಜಿಲ್ಲಾ ಕೃಷಿ ಇಲಾಖೆಗೆ 329 ಹುದ್ದೆಗಳು ಮಂಜೂರಾಗಿದೆಯಾದರೂ ಕೇವಲ 97 ಹುದ್ದೆ ಭರ್ತಿ ಮಾಡಲಾಗಿದೆ. ಒಟ್ಟು 232 ಸ್ಥಾನಗಳು ಖಾಲಿ ಇದ್ದು ಹೊಸದಾಗಿ ನೇಮಕ ಪ್ರಕ್ರಿಯೆ ನಡೆದಿಲ್ಲ. ಹಲವಾರು ವರ್ಷಗಳಿಂದ ನೇಮಕ ಪ್ರಕ್ರಿಯೆ ನಡೆಯದೆ ಇರುವುದು ಹಾಗೂ ವಯೋನಿವೃತ್ತಿ ಬಳಿಕ ಅಂತಹ ಸ್ಥಾನಗಳು ಖಾಲಿ ಇರುವುದರಿಂದ ಕಚೇರಿಗಳಲ್ಲಿ ಖಾಲಿ ಕುರ್ಚಿಗಳಿವೆ ಹೊರತು ಅಲ್ಲಿ ಕೆಲಸ ಮಾಡುವವರು ಇಲ್ಲವಾಗಿದ್ದಾರೆ.

# 11ನೇ ಯೋಗ ದಿನಾಚರಣೆ ಸಿದ್ಧತೆಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ. 21 ರಂದು ಅಚ್ಚುಕಟ್ಟಾಗಿ ಆಚರಿಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅಧಿಕಾರಿಗಳಿಗೆ ಸೂಚಿಸಿದ್ದಾರೆ.




ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಜೂ. 21ರ ಬೆಳಿಗ್ಗೆ 7 ಗಂಟೆಗೆ ಯೋಗ ಪ್ರದರ್ಶನದಲ್ಲಿ ವಿವಿಧ ಯೋಗ ಸಂಘ ಸಂಸ್ಥೆಗಳು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಲು ತಿಳಿಸಿದರು.

ಯೋಗ ದಿನಾಚರಣೆ ಅಂಗವಾಗಿ ಗಿಡ ನೆಡಲು ಜಾಗ ಗುರುತಿಸುವುದರ ಜೊತೆಗೆ ಅಗತ್ಯ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಯೋಗ ಪ್ರದರ್ಶನಕ್ಕೆ ಅನುಕೂಲವಾಗುವಂತೆ ಸ್ವಚ್ಛತೆಗೆ ಹಾಗೂ ವೇದಿಕೆ ನಿರ್ಮಾಣ ಕಾರ್ಯಕ್ಕೆ ಕ್ರಮವಹಿಸಲು ಮಹಾ ನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಯೋಗ ಪ್ರದರ್ಶನದ ವೇಳೆ ವಿದ್ಯುತ್ ಸಂಪರ್ಕದಲ್ಲಿ ಅಡೆತಡೆ ಆಗದಂತೆ ಎಚ್ಚರಿಕೆ ವಹಿಸುವಂತೆ ಕೆಪಿಟಿಸಿಎಲ್ ಅಧಿಕಾರಿಗಳಿಗೆ ಸೂಚಿಸಿದರು. ಯೋಗ ಪ್ರದರ್ಶನದಲ್ಲಿ ಭಾಗವಹಿಸುವವರಿಗೆ ಟೀ ಶರ್ಟ್ ವಿತರಣೆಗೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.


ಯೋಗ ದಿನಾಚರಣೆ ಅಂಗವಾಗಿ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲು ಸೂಚಿಸಿದರು. ಜಿಲ್ಲಾ ಮಟ್ಟದಲ್ಲಿ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಶಾಲಾ ಮಕ್ಕಳು ಹಾಗೂ ಸಾರ್ವಜನಿಕರಿಗೆ ಯೋಗ ತರಬೇತಿ ನೀಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಚಂದ್ರಮೌಳಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಜಿಲ್ಲಾ ಆಯುಷ್ ಅಧಿಕಾರಿ ಮೂಸಬೇರಿ ಹಾಗೂ ಇತರರಿದ್ದರು.

# ಬಾಲ ಕಾರ್ಮಿಕ ಪದ್ಧತಿ ಸಾಮಾಜಿಕ ಪಿಡುಗು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಳೇಬೀಡು: ಸಮಾಜದಲ್ಲಿ ಬಾಲ ಕಾರ್ಮಿಕ ಪದ್ಧತಿ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಪ್ರಜ್ಞಾವಂತ ನಾಗರಿಕರು ಎಚ್ಚರ ವಹಿಸಬೇಕು ಎಂದು ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹಳೇಬೀಡು ರಘುನಾಥ್ ತಿಳಿಸಿದರು.



ಹಳೇಬೀಡಿನ ಕೆಪಿಎಸ್ ಕಾಲೇಜು ಆವರಣದಲ್ಲಿ ವಿಶ್ವ ಬಾಲ ಕಾರ್ಮಿಕರ ಪದ್ಧತಿ ವಿರೋಧಿ ದಿನಾಚರಣೆ ಜಾಗೃತಿ ಮತ್ತು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, 5 ವರ್ಷದಿಂದ 17 ವರ್ಷದ ಒಳಗಿರುವ ಮಕ್ಕಳು ಶಾಲೆಯನ್ನ ಬಿಟ್ಟು ಗ್ಯಾರೇಜ್, ಖಾಸಗಿ ಕಾರ್ಖಾನೆ, ಹೋಟೆಲ್, ಬಾರ್ ಕೆಲಸ ಮಾಡುವ ಮಕ್ಕಳನ್ನು ವಿದ್ಯಾರ್ಥಿಗಳು ಗುರುತಿಸಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೆ ಅಂತಹವರ ಮೇಲೆ ಕಠಿಣ ಕಾನೂನು ಜರುಗಿಸಲಾಗುವುದು. ಇಂದಿನ ವಿದ್ಯಾರ್ಥಿಗಳು ಮೋಜು ಮಸ್ತಿ ಮಾಡಲು ಹಣ ಬೇಕಾಗಿರುವುದರಿಂದ ಇಂತಹ ಸಣ್ಣ-ಪುಟ್ಟ ಕೆಲಸಗಳಿಗೆ ವಿನಿಯೋಗಿಸಿಕೊಳ್ಳುತ್ತಾರೆ. ಪಾಲಕರು ತಮ್ಮ ಮಕ್ಕಳನ್ನು ಕೆಲಸಕ್ಕೆ ಬಿಟ್ಟು ಶಾಲೆಗೆ ಕಳುಹಿಸಲು ಪ್ರೋತ್ಸಾಹಿಸಬೇಕು. ವಿದ್ಯಾವಂತ ಮತ್ತು ಶ್ರೀಮಂತ ನಾಗರಿಕರು ಮುಂದೆ ಬಂದು ಸಮಾಜದ ಈ ವರ್ಗದ ಉನ್ನತಿಗೆ ಕೊಡುಗೆ ನೀಡಬಹುದು. ಬಾಲ ಕಾರ್ಮಿಕ ದುಷ್ಪರಿಣಾಮಗಳ ಬಗ್ಗೆ ಸಂದೇಶ ಸಾರಬೇಕು. ಈ ಬಗ್ಗೆ ಜಾಗೃತಿ ವಹಿಸಿ ಮಕ್ಕಳ ಉತ್ತಮ ಭವಿಷ್ಯಕ್ಕೆ ದಾರಿದೀಪವಾಗಬೇಕು ಎಂದು ತಿಳಿಸಿದರು.

ಪ್ರಾಂಶುಪಾಲಾರದ ವಿನುತ ಮಾತನಾಡಿ, ದೇಶದಲ್ಲಿ ಸಧೃಡ ಸಮಾಜ ಕಟ್ಟಲು ಬಾಲಕಾರ್ಮಿಕರ ಬಳಕೆಯಾಗುತ್ತಿರುವುದು ವಿರೋಧಿ ನೀತಿಯಾಗಿದ್ದು, ಇವುಗಳ ಬಗ್ಗೆ ಜಾಗೃತಿ ವಹಿಸಿ ಮಕ್ಕಳನ್ನ ವಿದ್ಯಾಭ್ಯಾಸಕ್ಕೆ ನಿಯೋಜಿಸಬೇಕಾಗಿದೆ ಎಂದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯಲ್ಲಿ ಸರ್ಕಾರದ ಪಾತ್ರ ಬಹುಮುಖ್ಯವಾಗಿದೆ. ನಮ್ಮ ಸಮಾಜದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಭರವಸೆಯನ್ನು ಸರ್ಕಾರ ನೀಡಬೇಕು ಎಂದು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ತಾಲ್ಲೂಕು ಘಟಕದ ಸಂಚಾಲಕ ಧನಂಜಯ್ ಮಾತನಾಡಿ, ಸಮಾಜದಲ್ಲಿ ಬಡವರಿಗೆ ನ್ಯಾಯಯುತ ಉದ್ಯೋಗ ನೀಡಲು ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಬೇಕಾಗಿದೆ. ರಾಷ್ಟ್ರಾದ್ಯಂತ ಇರುವ ವಿವಿಧ ಎನ್‌ಜಿಒಗಳು ಮುಂದೆ ಬಂದು ಈ ಜನರಿಗೆ ಉತ್ತಮ ಉದ್ಯೋಗಗಳನ್ನು ಪಡೆಯಲು ಅಥವಾ ಅವರನ್ನು ಸ್ವಯಂ ಉದ್ಯೋಗಿಗಳನ್ನಾಗಿ ಮಾಡಲು ವೃತ್ತಿಪರ ತರಬೇತಿ ನೀಡಬೇಕು ಎಂದರು.

ಉಪನ್ಯಾಸಕ ಬಸವರಾಜ್ ಪ್ರತಿಜ್ಞಾ ವಿಧಿ ಬೋಧಿಸಿದರು. ಉಪನ್ಯಾಸಕರಾದ ರಾಘವೇಂದ್ರ, ರಮೇಶ್, ಮಹೇಶ್, ನಾಗರಾಜ್, ಲೋಕೇಶ್, ಗೋಮತಿ, ಕವಿತಾ ಮತ್ತು ಇತರರಿದ್ದರು.

# ದೈಹಿಕ ಸಧೃಡತೆಗೆ ಮಾನಸಿಕ ಆರೋಗ್ಯ ಮುಖ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಬಹುತೇಕ ಕಾಯಿಲೆಗಳ ಮಾನಸಿಕ ಒತ್ತಡವೇ ಕಾರಣ. ಆದ್ದರಿಂದ ಮನುಷ್ಯ ಉದ್ವೇಗಕ್ಕೆ ಒಳಗಾಗುವುದು, ಅತಿಯಾಸೆ, ಅಸೂಯೆ, ಕ್ರೌರ್ಯ ಬೆಳೆಸಿಕೊಳ್ಳಬಾರದು ಎಂದು ಪುಷ್ಪಗಿರಿ ಮಹಾಸಂಸ್ಥಾನ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ಹಳೇಬೀಡು ಸಮೀಪದ ಪುಷ್ಪಗಿರಿ ಮಹಾಸಂಸ್ಥಾನದಲ್ಲಿ ಪುಷ್ಪಗಿರಿ ಗ್ರಾಮೀಣಾಭಿವೃದ್ಧಿ ಮಹಿಳಾ ಸ್ವ ಸಹಾಯ ಸಂಘದ ಪದಾಧಿಕಾರಿಗಳಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರ 2ನೇ ದಿನ ಆರೋಗ್ಯದ ಮಹಿಳೆಯರ ಪಾತ್ರ ಎಂಬ ವಿಷಯದಲ್ಲಿ ಮಾತನಾಡಿ, ಕುಟುಂಬದ ಜವಾಬ್ದಾರಿ ಹೊತ್ತ ಮಹಿಳೆಯರು ಹಗಲು-ರಾತ್ರಿ ಎನ್ನದೆ ನಿರಂತರ ಕೆಲಸದಿಂದ ತಮಗಿರುವ ಸಣ್ಣ-ಪುಟ್ಟ ಕಾಯಿಲೆಗಳ ಬಗ್ಗೆ ನಿರ್ಲಕ್ಷ್ಯ ಹೊಂದಿದ ಕಾರಣದಿಂದ ದೊಡ್ಡ ಸಮಸ್ಯೆ ಕುಟುಂಬಕ್ಕೆ ಕಾಡುತ್ತಿದೆ. ಮಹಿಳೆ ಇಡೀ ಕುಟುಂಬದ ಆರೋಗ್ಯ ಕಾಪಾಡಲು ಸಾಧ್ಯವಾಗುವ ನಿಟ್ಟಿನಲ್ಲಿ ಇಂತಹ ಕಾರ್ಯಾಗಾರಗಳ ಪ್ರಯೋಜನ ಪಡೆಯಬೇಕಿದೆ ಎಂದರು.

ಶ್ರೀ ಧರ್ಮಸ್ಥಳ ಆಯುರ್ವೇದ ಆಸ್ಪತ್ರೆ ಹೆಚ್‌ಓಡಿ ಡಾ. ಗುರುಬಸವರಾಜ ಯಲಗಚ್ಚಿನ ಮಾತನಾಡಿ, ನಿತ್ಯ ಕೆಲ ಸಮಯ ಯೋಗದಲ್ಲಿ ತೊಡಗಿಸಿಕೊಳ್ಳುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗಲಿದೆ. ಜೊತೆಗೆ ಬದುಕಿನಲ್ಲಿ ಸದಾ ಕ್ರೀಯಾಶೀಲತೆ, ಓದು, ವೃತ್ತಿ ಸೇರಿ ಮಾಡುವ ಯಾವುದೇ ಕೆಲಸದಲ್ಲಿ ಏಕಾಗ್ರತೆ ಸಾಧಿಸಲು ಪೂರಕವಾಗಲಿದೆ ಎಂದರು.

ಉತ್ತಮ ಆಹಾರ, ವ್ಯಾಯಾಮ ಮತ್ತು ಸಾಕಷ್ಟು ನಿದ್ರೆ ಇವು ಆರೋಗ್ಯಕರ ಜೀವನಕ್ಕೆ ಅಡಿಪಾಯ. ಆರೋಗ್ಯಕರ ಜೀವನ ಶೈಲಿ ನಿಮ್ಮನ್ನು ಸದಾ ಸಧೃಢವಾಗಿ, ಶಕ್ತಿಯುತ ಹಾಗೂ ಆರೋಗ್ಯವಾಗಿರಿಸುತ್ತದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಆರೋಗ್ಯಕರ ಜೀವನವು ಸಂತಸ ಜೀವನಕ್ಕೆ ಸುಲಭ ಮಾರ್ಗವಾಗಿದೆ.

ಮನುಷ್ಯನ ಆರೋಗ್ಯ ಮತ್ತು ಜೀವನ ಶೈಲಿಯು ಅನಾರೋಗ್ಯ, ಗಾಯ ಮತ್ತು ಕಾಯಿಲೆಗಳನ್ನುಂಟು ಮಾಡುವ ಅಪಾಯಕಾರಿ ನಡವಳಿಕೆಗಳನ್ನು ಒಳಗೊಂಡಿವೆ. ವರ್ತನೆಗಳು ಕ್ರಿಯಾತ್ಮಕವೂ ಹಾಗೂ ಪರಿವರ್ತನಾಶೀಲವೂ ಆದ ಕಾರಣ ಜನರಿಗೆ ಬದಲಾಗಲು ಮತ್ತು ಆರೋಗ್ಯಕರ ನಡವಳಿಕೆಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡಲಾಗುವುದು.

ಗೋಕಾಕ್ ಪಾಲ್ಸ್ ಮಹಾಲಿಂಗೇಶ್ವರ ಮಠದ ಪೂಜ್ಯ ಶ್ರೀ ಡಾ. ರವಿಶಂಕರ್ ಸ್ವಾಮೀಜಿ, ವಕೀಲ ಲೋಹಿತ್, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ನಾಗಯ್ಯ, ಜಿಲ್ಲಾ ಯೋಜನಾಧಿಕಾರಿ ವಿನುತ ಧನಂಜಯ, ದಯಾನಂದ ಹಾಗೂ ಇತರರಿದ್ದರು.

# ಕುಟುಂಬ ನಿರ್ವಹಣೆಯಲ್ಲಿ ಸ್ತ್ರೀಯರ ಪಾತ್ರ ಅಧಿಕ

ಕೊಣನೂರು: ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದ್ದು ಅವರು ಆರೋಗ್ಯಕ್ಕೆ ಆದ್ಯತೆ ನೀಡಬೇಕು ಎಂದು ಆರೋಗ್ಯ ನಿರೀಕ್ಷಕ ಆನಂದ್ ಗೌಡ ಹೇಳಿದರು.

ಕೊಣನೂರು ಗ್ರಾಮ ಪಂಚಾಯಿತಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಮಹಿಳಾ ಗ್ರಾಮ ಸಭೆಯಲ್ಲಿ ಮಾತನಾಡಿ, ಕುಟುಂಬ ಸಧೃಢವಾಗಿರಬೇಕೆಂದರೆ ಮಹಿಳೆಯರು ಆರೋಗ್ಯವಂತರಾಗಿರಬೇಕು. ಮಕ್ಕಳು, ಕುಟುಂಬದ ಹಿರಿಯರು, ಪತಿ ಹೀಗೆ ಎಲ್ಲರ ನಿಗಾ ವಹಿಸುವ ಮಹಿಳೆಯರು ಕೆಲಸದೊತ್ತಡ ಮತ್ತಿತರ




ಕಾರಣಗಳಿಂದ ಅನಾರೋಗ್ಯಕ್ಕೀಡಾಗುತ್ತಾರೆ. ಆದರೆ ವೈದ್ಯರ ಭೇಟಿಯಾಗಲು ಹಿಂಜರಿಯುತ್ತಾರೆ ಎಂದರು.

ಆರೋಗ್ಯ ಮುಖ್ಯವಾಗಿದ್ದು ನಿರ್ಲಕ್ಷ್ಯ ವಹಿಸದೆ ಹತ್ತಿರದ ಆಸ್ಪತ್ರೆಗಳಿಗೆ ಭೇಟಿ ನೀಡಬೇಕು. ಸರ್ಕಾರ ಮಹಿಳಾ ಸಬಲೀಕರಣಕ್ಕಾಗಿ ಹಲವು ಯೋಜನೆ ರೂಪಿಸಿದೆ. ಅಂಗನವಾಡಿಗಳು ಮಹಿಳಾಪರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವೆ. ಅರ್ಹರು ಇದರ ಪ್ರಯೋಜನ ಪಡೆಯಬೇಕು ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ನಾಗರಾಜ್ ಶೆಟ್ಟಿ, ಉಪಾಧ್ಯಕ್ಷೆ ಪಾವನ ಸತೀಶ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದಿವಾಕರ್ ಹಾಗೂ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಜೂನ್-15

1947: ಭಾರತ ವಿಂಗಡನೆಯ ಯೋಜನೆ ಅಂಗೀಕಾರ. ಲಾರ್ಡ್ ಮೌಂಟ್‌ಬ್ಯಾಟನ್ ಪ್ರಸ್ತಾಪಿಸಿದ ವಿಂಗಡನೆಯ ಯೋಜನೆಗೆ ಭಾರತ ಮತ್ತು ಪಾಕಿಸ್ತಾನದ ಭಿನ್ನರಾಜ್ಯ ರೂಪಕ್ಕೆ ಅನುಮೋದನೆ ಸಿಕ್ಕಿತು. ಇದರಿಂದಾಗಿ ಭಾರತ ಮತ್ತು ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರಗಳಾಗಿ ಉದಯವಾಗಲು ದಾರಿ ಸುಗಮವಾಯಿತು.

1997: ಮಹಾಪಂಡಿತ್ ರಾಹುಲ್ ಸಾಂಕೃತ್ಯಾಯನ್ ಅವರಿಗೆ ಮರಣೋತ್ತರ ಭಾರತ ರತ್ನ. ಪ್ರವಾಸಿ, ಚಿಂತಕ ಮತ್ತು ಲೇಖಕ ರಾಹುಲ್ ಸಾಂಕೃತ್ಯಾಯನ್ ಅವರನ್ನು ಸರ್ಕಾರವು ಭಾರತದ ಅತ್ಯುನ್ನತ ನಾಗರಿಕ ಗೌರವ ಭಾರತ ರತ್ನ ನೀಡಿ ಗೌರವಿಸಿತು.

### ಜನನ

1931: ನಜ್ಮಾ ಹೆಪ್ತುಲ್ಲಾ. ಭಾರತದ ಖ್ಯಾತ ರಾಜಕಾರಣಿ, ಸಂಸತ್ ಸದಸ್ಯೆ

### ಮರಣ

1999: ಮಾಧುರಿ ದೀಕ್ಷಿತ್ ಅವರ ತಂದೆ ಶಂಕರ ದೀಕ್ಷಿತ್.

# ರಕ್ತದಾನವೆಂಬುದು ಶ್ರೇಷ್ಠ ಪೂಜೆ



**- ಚೇತನ್ ಗುರೂಜಿ,**
**ಬಸವ ಯೋಗ ಕೇಂದ್ರ, ಅಡಗೂರು**

**ಕನ್ನಡ ಪೋಸ್ಟ್ ವಿಶೇಷ**


ಅನೇಕ ಸಭೆ ಸಮಾರಂಭಗಳಲ್ಲಿ ಮಾತನಾಡುವಾಗ ಹೇಳುವಂಥದ್ದು ದಾನಗಳಲೆಲ್ಲಾ ಶ್ರೇಷ್ಠದಾನ ರಕ್ತದಾನ ಎಂದು. ಏಕೆ ಹಾಗೆ ಹೇಳುತ್ತಾರೆಂದರೆ ಯಾವುದೇ ಕಾರ್ಖಾನೆಯಲ್ಲಿ ತಯಾರಾಗಿ ಸಿಗುವಂತಹ ವಸ್ತುವಲ್ಲ. ದೇಹವೆಂಬ ಕಾರ್ಖಾನೆಯಲ್ಲಿ ಮಾತ್ರ ತಯಾರಾಗಿ ಅವಶ್ಯಕತೆ ಇರುವವರಿಗೆ ಕೊಡಲಿಕ್ಕೆ ಸಾಧ್ಯವಾಗುವಂತಹ ಅದ್ಭುತವಾದ ವಸ್ತುವೇ ರಕ್ತ. ಇಷ್ಟೆಲ್ಲಾ ವಿಜ್ಞಾನ ಮುಂದುವರೆದಿದ್ದರೂ ಒಂದು ಹನಿ ರಕ್ತವನ್ನು ತಯಾರು ಮಾಡಲು ಸಾಧ್ಯವಿಲ್ಲ. ಮನುಷ್ಯನ ದೇಹದಲ್ಲೇ ಮಾತ್ರ ಉತ್ಪತ್ತಿಯಾಗುವ ವ್ಯವಸ್ಥೆ. ನಾವು ಏನೆಲ್ಲಾ ಆಹಾರ ಪದಾರ್ಥ ತಿಂದರೂ ಅದನ್ನು ಜೀರ್ಣ ಮಾಡಿ ಬೇಕಾದಂತದ್ದನ್ನು ದೇಹಕ್ಕೆ ಶಕ್ತಿಯಾಗಿ ಪರಿವರ್ತಿಸಿ ಅದರಲ್ಲೇ ರಕ್ತವನ್ನು ಉತ್ಪಾದಿಸುತ್ತದಲ್ಲ ದೇಹಕ್ಕೆ ಒಂದು ಧನ್ಯವಾದ ಹೇಳಬಾರದೆ.

### ತಪ್ಪು ತಿಳವಳಿಕೆಯಿಂದ ಹೊರಬನ್ನಿ

ಇತ್ತೀಚಿನ ದಿನಗಳಲ್ಲಿ ರಕ್ತದ ಕೊರತೆಯಿಂದ ಬಹಳಷ್ಟು ಜನರ ಜೀವವನ್ನು ಉಳಿಸಲು ಕಷ್ಟವಾಗುತ್ತಿರುವುದನ್ನು ಕೇಳುತ್ತಿರುತ್ತೇವೆ. ರಕ್ತದಾನದ ಮಹತ್ವ ಅಥವಾ ರಕ್ತದ ಅವಶ್ಯಕತೆ ಎಷ್ಟಿದೆ ಎಂಬುದು ನಮ್ಮ ಹತ್ತಿರದ ವ್ಯಕ್ತಿಗಳಿಗೆ ತುರ್ತಾಗಿ ಎರಡು ಅಥವಾ ಮೂರು ಬಾಟಲ್ ರಕ್ತ ಬೇಕಾಗಿದೆ ಕೆಲವೇ ಗಂಟೆಗಳಲ್ಲಿ ತಕ್ಷಣ ವ್ಯವಸ್ಥೆ ಮಾಡಿ ಎಂದು ವೈದ್ಯರು ತಿಳಿಸಿದರೆ ಬೇರೆಯವರನ್ನು ಸಂಪರ್ಕಿಸಿ ವ್ಯವಸ್ಥೆ ಮಾಡುವಾಗ ಕಷ್ಟವಾಗುತ್ತದಲ್ಲ ಆ ಸಂದರ್ಭದಲ್ಲಿ ಗೊತ್ತಾಗುತ್ತದೆ. ರಕ್ತ ಕೊಡುವವರ ಸಂಖ್ಯೆ ಕಡಿಮೆ ಇನ್ನೂ ಕೆಲವರ ಮನಸ್ಥಿತಿ ಹೇಗಿರುತ್ತದೆ ಎಂದರೆ ಅವಶ್ಯಕತೆ ಬಿದ್ದಾಗ ಕೊಡೋಣ ಈಗ ಕೊಡುವುದು ಬೇಡ ಎಂದು ಅಂದುಕೊಂಡು ಸುಮ್ಮನಾಗುವವರು ಸಹ ಇದ್ದಾರೆ. ಬೇಕೆಂದಾಗ ಸಂಪರ್ಕಿಸಲು ಸಾಧ್ಯವಾಗದೇ ಹೋಗಬಹುದು ಬಂದು ಕೊಡಲು ಸಮಯವೂ ಹಿಡಿಯಬಹುದು ಅಷ್ಟೊತ್ತಿಗಾಗಲೇ ಅವರ ಜೀವಕ್ಕೆ ಹಾನಿಯಾಗಬಹುದು. ತಕ್ಷಣದಲ್ಲಿ ಸಂಗ್ರಹ ಇದ್ದರೆ ವ್ಯವಸ್ಥೆ ಮಾಡುವುದಕ್ಕೆ ಸುಲಭವಾಗುತ್ತದೆ. ಆ ಸಂದರ್ಭ ಬಂದಾಗ ಕೊಡುತ್ತೇವೆ ಎಂದುಕೊಂಡು ಸುಮ್ಮನಿದ್ದರೆ ಆಗುವುದಿಲ್ಲ. ಕಾರಣ ನೀವು ಕೊಟ್ಟ ರಕ್ತವನ್ನು ಪರೀಕ್ಷಿಸಿ ಅದರಲ್ಲಿ ವಿಂಗಡಣೆ ಮಾಡಿ ನಂತರದಲ್ಲೇ ಕೊಡಬೇಕಾಗುತ್ತೆ. ಅಷ್ಟೊತ್ತಿಗೆ ಬಹಳಷ್ಟು ಸಮಯವಾಗುತ್ತದೆ. ಇಂತಹ ತಪ್ಪು ತಿಳವಳಿಕೆಯಿಂದ ಹೊರಬನ್ನಿ. ಅಲ್ಲಲ್ಲಿ ರಕ್ತದಾನ ಶಿಬಿರಗಳು ಆಯೋಜನೆಗೊಂಡಾಗ ನಾವು ಸ್ವಯಂ ಪ್ರೇರಣೆಯಿಂದ ರಕ್ತದಾನವನ್ನು ಮಾಡಿದರೆ ಅನುಕೂಲವೂ ಮತ್ತು ತಕ್ಷಣ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ಬೇಕಾಗುತ್ತದೆ.

### ರಕ್ತದಾನದಿಂದ ಲಾಭಗಳಿವೆ

ರಕ್ತದಾನ ಮಾಡುವುದರಿಂದ ನಮಗೇನು ಲಾಭ ಎಂದು ಕೇಳುವ ಜನರಿದ್ದಾರೆ. ಮತ್ತೆ ಕೆಲವರು ನಮಗೆ ಬೇಕಾದಾಗ ರಕ್ತ ಕೊಡುತ್ತಾರ ಎಂದು ಕೇಳುತ್ತಾರೆ. ಖಂಡಿತ ನೀವು ಕೊಟ್ಟ ರಕ್ತದಾನದ ಸರ್ಟಿಫಿಕೇಟ್ ನಿಮ್ಮ ಹತ್ತಿರ ಇದ್ದರೆ ಬ್ಲಡ್ ಬ್ಯಾಂಕುಗಳಿಗೆ ಹೋಗಿ ತೋರಿಸಿದರೆ ಸುಲಭವಾಗಿ ವ್ಯವಸ್ಥೆ ಮಾಡುವುದುಂಟು. ಪರೀಕ್ಷಿಸಿದ ಖರ್ಚನ್ನು ತೆಗೆದುಕೊಂಡು ಕೊಡುತ್ತಾರೆ. ಇನ್ನೂ ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿರುವುದು ಏನೆಂದರೆ ದಾನ ಮಾಡುವಂತಹ ವ್ಯಕ್ತಿಗೆ ಹೆಚ್ಚು ಲಾಭ. ಅವನಿಗೆ ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯ ಸಂಬಂಧಿತ




ತೊಂದರೆ, ಕೊಲೆಸ್ಟ್ರಾಲ್, ಮರೆವಿನ ಕಾಯಿಲೆ, ನರ ದೌರ್ಬಲ್ಯ ಸಮಸ್ಯೆಗಳು ಬರುವುದಿಲ್ಲ. ರಕ್ತಶುದ್ಧಿ ಕ್ರಿಯೆಯು ಆಗುತ್ತದೆ. ಇನ್ನೊಂದು ತಪ್ಪು ಕಲ್ಪನೆ ಏನಿದೆ ಎಂದರೆ ರಕ್ತದಾನವನ್ನು ಮಾಡಿದ ಮೇಲೆ ದಪ್ಪ ಆಗುತ್ತಾರಲ್ಲ ಎಂಬ ನಂಬಿಕೆ ಇದೆ. ವಾಸ್ತವವಾಗಿ ಹಾಗೆ ಆಗುವುದಿಲ್ಲ. ಉದಾಹರಣೆಗೆ ನಾನು 98 ಬಾರಿ ರಕ್ತದಾನ ಮಾಡಿದ್ದೇನೆ. ಅಂತಹ ಯಾವುದೇ ತೊಂದರೆ ನನಗೆ ಕಾಣಿಸಿಲ್ಲ. ಜೊತೆಗೆ ಪ್ರತಿನಿತ್ಯ ಎರಡು ಗಂಟೆ ಯೋಗಾಭ್ಯಾಸ, ಜಮೀನಿನ ಕೆಲಸ ಅಲ್ಲದೆ ಲೇಖನಗಳ ಬರೆಯುವುದು ಅನೇಕ ಕಡೆ ಉಪನ್ಯಾಸಗಳಿಗೆ ಹೋಗುವುದು ಎಲ್ಲದರಲ್ಲೂ ಇನ್ನೂ ಉತ್ಸಾಹ ಜಾಸ್ತಿ ಆಗುತ್ತಿದೆ.

### ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಿ

ನಮ್ಮ ಶಿಬಿರದಲ್ಲೇ ಅನೇಕ ಸಂಘ ಸಂಸ್ಥೆಗಳ ಸಹಕಾರದಿಂದ 10,000 ಕ್ಕಿಂತಲೂ ಹೆಚ್ಚು ಯೂನಿಟ್ (ಬಾಟಲ್) ರಕ್ತ ಸಂಗ್ರಹವಾಗಿದೆ. ಇಲ್ಲಿಯವರೆಗೆ ಯಾವುದೇ ತೊಂದರೆಗಳು ಯಾರಿಗೂ ಆಗಿಲ್ಲ. ಮತ್ತೊಂದು ವಿಷಯ ಗೊತ್ತಿರಲಿ, ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದ ಕಣಗಳು ಸಾಯುತ್ತವೆ ಮತ್ತೆ ಹುಟ್ಟುತ್ತವೆ. ಅದೇ ದಾನ ಮಾಡಿದರೆ ಇನ್ನೊಂದು ಜೀವಕ್ಕೆ ಅನುಕೂಲವಾಗುತ್ತದೆ. ಒಮ್ಮೆ ದಾನ ಮಾಡಿದರೆ ನಾಲ್ಕು ಜನರ ಜೀವವನ್ನು ಉಳಿಸಿದ ಪುಣ್ಯ ಸಿಗುತ್ತದೆ. ಜೀವ ಕೊಡಲು ಬರುವುದಿಲ್ಲ ಆದರೆ ಜೀವ ಉಳಿಸಲು ರಕ್ತದ ಅವಶ್ಯಕತೆ ಇರುವವರಿಗೆ ಉಪಯೋಗವಾಗುತ್ತದೆ.

### ರಕ್ತದಾನಕ್ಕೆ ಅರ್ಹರು ಯಾರು

ರಕ್ತದಾನವನ್ನು ಯಾರು ಮಾಡಲು ಯೋಗ್ಯರು ಎಂಬುದು ಮುಖ್ಯ. 18 ವರ್ಷ ಮೇಲ್ಪಟ್ಟ 55 ವರ್ಷ ಒಳಗಿನ ಆರೋಗ್ಯವಂತ ಹಾಗೆ ದೇಹದ ತೂಕ 45 ಕೆಜಿಗಿಂತಲೂ ಹೆಚ್ಚಿರುವ ಎಲ್ಲರೂ ದಾನ ಮಾಡಬಹುದು. ಪುರುಷರು ಪ್ರತಿ ಮೂರು ತಿಂಗಳಿಗೊಮ್ಮೆ ಮಹಿಳೆಯರು ನಾಲ್ಕು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದಾಗಿದೆ. ನಿಮ್ಮೆಲ್ಲರಿಗೂ ತಿಳಿಸಬೇಕಾದ ವಿಷಯವೆಂದರೆ, ನಮ್ಮ ಶಿಬಿರದಲ್ಲಿ ಸ್ವಯಂ ಪ್ರೇರಣೆಯಿಂದ ಮಹಿಳೆಯರು ಹೆಚ್ಚು ದಾನ ಮಾಡಲು ಬರುತ್ತಾರೆ. ಅದರಲ್ಲಿ ಒಂದೆರಡು ಉದಾಹರಣೆ ಕೊಡಬಹುದಾದರೆ ಸಕಲೇಶಪುರದ ರೋಟರಿ ಸಂಸ್ಥೆಯ ಮಾಜಿ ಅಧ್ಯಕ್ಷ ಸುರೇಶ್ ಅವರ ಪತ್ನಿ ಶ್ರೀಮತಿ ರೇಖಾ ಸುರೇಶ್ 75 ಬಾರಿ ರಕ್ತದಾನ ಮಾಡಿದ್ದಾರೆ. ಬಾಳ್ಳುಪೇಟೆ ಹತ್ತಿರ ಕುನಿಗನಹಳ್ಳಿಯ ಕಾಫಿ ಬೆಳೆಗಾರರಾದ ಶ್ರೀಮತಿ ಭಾವನಾಚರಣ್ ಆರಕ್ಕಿಂತಲೂ ಹೆಚ್ಚಿನ ಬಾರಿ ದಾನ (ಓ ನೆಗೆಟಿವ್) ಮಾಡಿದ್ದಾರೆ. ಹೀಗೆ ತಿಳಿಸುತ್ತಾ ಹೋದರೆ ಬಹಳ ವಿಶೇಷವಾದ ದಾನಿಗಳ ಪಟ್ಟಿಯೇ ಇದೆ. ನಮ್ಮ ಶಿಬಿರದಲ್ಲೇ 25 ಬಾರಿಗಿಂತಲೂ ಹೆಚ್ಚು ಕೊಟ್ಟಿರುವವರು ನೂರಾರು ಜನರಿದ್ದಾರೆ. ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಕಾರ್ಯದರ್ಶಿಗಳಾದ ಪಾಳ್ಯ ರಘು 50 ಬಾರಿ, ಚನ್ನರಾಯಪಟ್ಟಣದ ರವಿಶಂಕರ್ 30ಕ್ಕಿಂತಲೂ ಹೆಚ್ಚು ಬಾರಿ, 24 ವರ್ಷದ ಮನೋಜ್ 13 ಬಾರಿ ರಕ್ತದಾನ ಮಾಡಿದ್ದಾನೆ. ನಾವೆಲ್ಲ ರಕ್ತದಾನ ಮಾಡಲು ನೀವೇ ಸ್ಫೂರ್ತಿ ಎಂದು ಅವರು ಹೇಳುತ್ತಿರುತ್ತಾರೆ. ರಕ್ತದಾನ ಶಿಬಿರಗಳು ನಗರಗಳಿಗಿಂತ ಹಳ್ಳಿಗಳಲ್ಲೇ ಹೆಚ್ಚು ಆಯೋಜನೆ ಮತ್ತು ದಾನ ಮಾಡಿರುವ ಸಂಖ್ಯೆ ಜಾಸ್ತಿ. ವ್ಯಕ್ತಿಗಳಿಂದ ತೆಗೆದ ರಕ್ತವನ್ನು ಮೂರು ಭಾಗಗಳಾಗಿ ಪ್ಲಾಸ್ಮಾ, ಪ್ಲೇಟ್ ಲೆಟ್ಸ್, ಪ್ರಾಕ್ಟ ಸೆಲ್ಸ್ ಎಂದು ವಿಂಗಡಿಸುತ್ತಾರೆ. ರೋಗಿಗೆ ಯಾವುದರ ಅವಶ್ಯಕತೆ ಇರುತ್ತದೆ ಅದನ್ನು ಕೊಡುವುದುಂಟು. ದೇಶದಲ್ಲಿ ರಕ್ತದ ಕೊರತೆ ಶೇ. 2ರಷ್ಟಿದೆ. ಈಗ ಸಿಗುತ್ತಿರುವುದು ಶೇ. 0.3 ಮಾತ್ರ. ಪ್ರತಿವರ್ಷವೂ ಜೂನ್ 14 ವಿಶ್ವ ರಕ್ತದಾನಿಗಳ ದಿನ ಎಂದು ಆಚರಿಸುತ್ತೇವೆ. ಅರಿವು ಮೂಡಿಸುತ್ತಿದ್ದೇವೆ. ರಕ್ತದ ಕೊರತೆ ಮಾತ್ರ ಇನ್ನು ಇದೆ. ನಮ್ಮ ಆರೋಗ್ಯಕ್ಕಾಗಿ ಯೋಗ ಶಿಬಿರದಲ್ಲೂ ರಕ್ತದಾನ ಏರ್ಪಡಿಸಿ ಶಿಬಿರಾರ್ಥಿಗಳು




ಅಲ್ಲದೆ ಸಂಘ ಸಂಸ್ಥೆಗಳ ಮತ್ತು ಸ್ಥಳೀಯರ ಸಹಕಾರದಿಂದ ಪ್ರತಿ ತಿಂಗಳು ಐವತ್ತು ಅಥವಾ ನೂರು ಯೂನಿಟ್ ರಕ್ತಸಂಗ್ರಹ ಮಾಡುತ್ತಿರುತ್ತೇವೆ. ಪ್ರಕೃತಿ ನಮಗೆ ಇಷ್ಟೆಲ್ಲ ಕೊಟ್ಟಿರುವಾಗ ನಮ್ಮಿಂದ ಏನಾದರೂ ಕೊಡಲು ಸಾಧ್ಯವಾಗುವಂತದ್ದು ಇದ್ದರೆ ಅದುವೇ ರಕ್ತದಾನ.

ದೇಶದ ಗಡಿ ಕಾಯುವ ಸೈನಿಕ ಪ್ರಾಣವನ್ನು ಲೆಕ್ಕಿಸದೆ ದೇಶದೊಳಗೆ ಇರುವ ಜನರ ರಕ್ಷಣೆ ಮಾಡುವಾಗ ನಾವುಗಳು ಒಳಗಿರುವವರ ಜನರ ಜೀವವನ್ನು ಉಳಿಸುವ ಸಲುವಾಗಿ ರಕ್ತದಾನವನ್ನು ಮಾಡಿದರೆ ಇದೊಂದು ಸೇವೆ ಅಲ್ಲವೇ. ಇತ್ತೀಚೆಗೆ ಅಪಘಾತ, ಹೃದಯ ಕಾಯಿಲೆ, ಹೆರಿಗೆ, ಡೆಂಗ್ಯೂ ಇನ್ನಿತರೆ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ತತ್‌ಕ್ಷಣ ಸಿಗದೇ ಹೋದಾಗ ಅವರ ಪ್ರಾಣ ಹೋಗುವ ಸಾಧ್ಯತೆ ಹೆಚ್ಚಿರುತ್ತದೆ. ಪರಿಹಾರವನ್ನು ನಾವೇ ಕಂಡುಕೊಳ್ಳದೆ ಹೋದರೆ ಮುಂದೆ ಕಷ್ಟವಾಗಬಹುದು.

ಈ ಲೇಖನ ಓದಿದ ಮೇಲಾದರೂ ರಕ್ತದಾನ ಮಾಡಲು ಯುವಕರು ಹೆಚ್ಚು ಆಸಕ್ತಿ ತೋರಿಸುವ ರೀತಿ ನಮ್ಮ ತಂದೆ ತಾಯಿಯಂದಿರು ಕಾಳಜಿ ವಹಿಸಿದರೆ ಒಳ್ಳೆಯದು. ಏಕೆಂದರೆ ಸರ್ವಜ್ಞರು ಹೇಳಿದ ರೀತಿ ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತೆನಬೇಡ, ಆ ಶಿವನಲ್ಲಿ ಕಟ್ಟಿಹೋದ ಬುತ್ತಿ ಸರ್ವಜ್ಞ. ಮಾಡಿದ ದಾನ ಯಾವತ್ತೂ ಸಹ ತೆಗೆದುಕೊಳ್ಳುವವರಿಗಿಂತ ಕೊಟ್ಟವರಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಅದರಲ್ಲೂ ನಾವು ಏನು ಕೊಡುತ್ತೇವೋ ನಮಗೆ ಸಿಗುತ್ತದೆ. ಅಂದರೆ ಜಗತ್ತು ಕನ್ನಡಿ ಇದ್ದಹಾಗೆ ಮುಖದಲ್ಲಿ ಏನು ಕಾಣುತ್ತದೋ ಅದನ್ನು ಮಾತ್ರ ತೋರಿಸುತ್ತದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248